# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2019-20ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಲಾಗಿರುವ "ರೈತಸಿರಿ" ಹೊಸ ಕಾರ್ಯಕ್ರಮದ ಯೋಜನೆಗೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:
1. 2019-20ನೇ ಸಾಲಿನ ಜುಲೈ ಆಯವ್ಯಯ ಭಾಷಣ ಕಂಡಿಕೆ-59(vi)
2. ಕೃಷಿ ಆಯುಕ್ತರವರ ಪತ್ರ ಸಂ. ಉಕೃನಿ/ಸಾ.ಕಾ.ಫ/ರೈತಸಿರಿ/ಪ್ರಸ್ತಾವನೆ/2018-19 ದಿನಾಂಕ 11.03.2019.
3. ಕೃಷಿ ಆಯುಕ್ತರವರ ಪತ್ರ ಸಂ. ಉಕೃನಿ/ಸಾ.ಕೃ.ಫ/ರೈತಸಿರಿ/ಪ್ರಸ್ತಾವನೆ/2019-20 ದಿನಾಂಕ 04.04.2019.

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿ, 2019-20ನೇ ಸಾಲಿನ ಜುಲೈ ಆಯವ್ಯಯ ಭಾಷಣ ಕಂಡಿಕೆ-59(vi) ರಲ್ಲಿ ಸಿರಿಧಾನ್ಯ ಬೆಳೆಗಾರರಿಗೆ ಉತ್ತೇಜನ ನೀಡಲು "ರೈತಸಿರಿ" ಎಂಬ ಹೊಸ ಯೋಜನೆಯನ್ನು ರೂಪಿಸಲಾಗಿದೆ. ಈ ಯೋಜನೆಯಲ್ಲಿ ಸಿರಿಧಾನ್ಯಗಳ ವಿಸ್ತೀರ್ಣವನ್ನು ವಿವಿಧ ಹಂಗಾಮುಗಳಲ್ಲಿ ಹೆಚ್ಚಿಸಲು ಒಟ್ಟಾರೆ 10,000 ಹೆಕ್ಟೇರ್‌ಗಳಿಗೆ ಪ್ರತಿ ಹೆಕ್ಟೇರ್‌ಗೆ ರೂ.10,000/- ಗಳಂತೆ ರೈತರಿಗೆ ಅನುದಾನವನ್ನು ನೇರ ನಗದು ವರ್ಗಾವಣೆ ಮೂಲಕ ಪಾವತಿಸಲಾಗುವುದು. ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ರೂ.10.00 ಕೋಟಿ ಅನುದಾನ ಒದಗಿಸುವುದಾಗಿ ಸನ್ಮಾನ್ಯ ಮುಖ್ಯಮಂತ್ರಿಯವರು ಘೋಷಿಸಿರುತ್ತಾರೆ.

ಮೇಲೆ ಓದಲಾದ (2) ರಲ್ಲಿ ಕೃಷಿ ಆಯುಕ್ತರವರ ಪ್ರಸ್ತಾವನೆಯಲ್ಲಿ, 2019-20ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಘೋಷಿಸಿರುವ ಹೊಸ ಕಾರ್ಯಕ್ರಮ ರಾಜ್ಯದಲ್ಲಿ ಸಿರಿಧಾನ್ಯ ಬೆಳೆಗಾರರಿಗೆ ಉತ್ತೇಜನ ನೀಡಲು "ರೈತಸಿರಿ" ಯೋಜನೆಯ ಅನುಷ್ಠಾನಕ್ಕಾಗಿ ರಾಜ್ಯವಲಯದ ಸಾವಯವ ಕೃಷಿ ಯೋಜನೆಯ ಲೆಕ್ಕ ಶೀರ್ಷಿಕೆ: 2401-00-104-0-12ರ ಉ.ಶೀ-106 ರಡಿ ರೂ.812.00 ಲಕ್ಷಗಳು, ಕೃಷಿ ಉ.ಶೀ-422 ರಡಿ ರೂ.113.00 ಲಕ್ಷಗಳು ಹಾಗೂ ಉ.ಶೀ-423 ರಡಿ ರೂ.75.00 ಲಕ್ಷಗಳನೊಳಗೊಂಡಂತೆ ಒಟ್ಟು ರೂ.10.00 ಕೋಟಿಗಳ ಅನುದಾನದಲ್ಲಿ ಕಾರ್ಯಕ್ರಮದ ಅನುಷ್ಠಾನಕ್ಕೆ ಅನುಮೋದನೆ ನೀಡಿ, ಸರ್ಕಾರಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಮೇಲೆ ಓದಲಾದ (3) ರಲ್ಲಿ ಕೃಷಿ ಆಯುಕ್ತರವರ ಪ್ರಸ್ತಾವನೆಯಲ್ಲಿ, "ರೈತಸಿರಿ" ಹೊಸ ಕಾರ್ಯಕ್ರಮಕ್ಕೆ ಸವಿವರ ಮಾರ್ಗಸೂಚಿಗಳನ್ನು ಲಗತ್ತಿಸಿ, ಮಾರ್ಗಸೂಚಿಗೆ ಅನುಮೋದನೆ ನೀಡಿ ಯೋಜನೆ ಅನುಷ್ಠಾನಕ್ಕೆ ಸರ್ಕಾರದ ಸಹಮತಿ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಶವಾಗಿ ಪರಿಶೀಲಿಸಿ, ಸರ್ಕಾರವು 2019-20ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-59(vi) ಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಕೃಇ 45 ಕೃಯೋಕಾ 2019, ಬೆಂಗಳೂರು, ದಿನಾಂಕ 17.07.2019

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, 2019-20ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ-59(vi) ರಲ್ಲಿ ಘೋಷಿಸಲಾಗಿರುವ "ರೈತಸಿರಿ" ಎಂಬ ಹೊಸ ಯೋಜನೆಯನ್ನು ಸಿರಿಧಾನ್ಯ ಬೆಳೆಯನ್ನು ಉತ್ತೇಜಿಸಲು ಸಿರಿಧಾನ್ಯ ಬೆಳೆಯುವ ಬೆಳೆಗಾರರಿಗೆ (ರಾಗಿ, ಜೋಳ ಮತ್ತು ಸಜ್ಜೆ ಬೆಳೆಗಾರರನ್ನು ಹೊರತುಪಡಿಸಿ) ಪ್ರತಿ ಹೆಕ್ಟೇರ್‌ಗೆ ರೂ.10,000/- ಗಳ ಪ್ರೋತ್ಸಾಹಧನವನ್ನು ಎರಡು ಹೆಕ್ಟೇರ್‌ಗೆ ಸೀಮಿತಗೊಳಿಸಿ ನೇರ ಸೌಲಭ್ಯ ವರ್ಗಾವಣೆ ಮೂಲಕ (Direct Benefit Transfer) ರೈತರ ಬ್ಯಾಂಕ್ ಖಾತೆಗೆ ಜಮೆ ಮಾಡುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ನೀಡಿದೆ.

..2)

ಈ ಕಾರ್ಯಕ್ರಮದ ವೆಚ್ಚವನ್ನು 2019-20ನೇ ಸಾಲಿನ ಆಯವ್ಯಯದ ಸಾವಯವ ಕೃಷಿ ಯೋಜನೆಯ ಲೆಕ್ಕ ಶೀರ್ಷಿಕೆ: 2401-00-104-0-12ರ ಉಪ ಶೀರ್ಷಿಕೆ-106 ರಡಿ ರೂ.812.00 ಲಕ್ಷಗಳು, ಉಪ ಶೀರ್ಷಿಕೆ-422 ರಡಿ ರೂ.113.00 ಲಕ್ಷಗಳು ಹಾಗೂ ಉಪ ಶೀರ್ಷಿಕೆ-423 ರಡಿ ರೂ.75.00 ಲಕ್ಷಗಳನೊಳಗೊಂಡಂತೆ ಒಟ್ಟು ರೂ.10.00 ಕೋಟಿ (ಹತ್ತು ಕೋಟಿ ರೂಪಾಯಿಗಳು ಮಾತ್ರ) ಅನುದಾನದ ಮಿತಿಯೊಳಗೆ ಭರಿಸತಕ್ಕದ್ದು. ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿನ ಮಾರ್ಗಸೂಚಿಗಳನ್ವಯ ಹೊಸ ಯೋಜನೆಯ ಅನುಷ್ಠಾನಕ್ಕೆ ಸರ್ಕಾರವು ಅನುಮೋದನೆ ನೀಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 430 ವೆಚ್ಚ-4/2019 ದಿನಾಂಕ 11-06-2019 ಹಾಗೂ ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿ 17 ಪಿಎಫ್ಒ 2019 ದಿನಾಂಕ 30-03-2019 ರಂದು ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ

B S Nagarathnam

(ಬಿ.ಎಸ್. ನಾಗರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ (ಯೋಜನೆ)

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್ಎಸ್ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-1
2. ಪ್ರಧಾನ ಮಹಾಲೇಖಪಾಲರು (ಇ&ಆರ್ಎಸ್ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-1
3. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು
4. ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು.
6. ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
9. ಆಯುಕ್ತರು / ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
10. ಆಯುಕ್ತರು / ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು
11. ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಕೇಂದ್ರ, ಬೆಂಗಳೂರು.
12. ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ, ಬೆಂಗಳೂರು
13. ಸರ್ಕಾರದ ಉಪ ಕಾರ್ಯದರ್ಶಿ-1, ಆರ್ಥಿಕ ಇಲಾಖೆ (ವೆಚ್ಚ), ವಿಧಾನ ಸೌಧ, ಬೆಂಗಳೂರು.
14. ಸರ್ಕಾರದ ಉಪ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ (ಪ್ರಕರಣ ಸಂಖ್ಯೆ: ಸಿ-405/2019)
15. ಸರ್ಕಾರದ ಉಪ ಕಾರ್ಯದರ್ಶಿ ಮತ್ತು ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಇಲಾಖೆ, ಬೆಂಗಳೂರು.
16. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
17. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ-4), ವಿಧಾನ ಸೌಧ, ಬೆಂಗಳೂರು.
18. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ., ಖನಿಜ ಭವನ, ಬೆಂಗಳೂರು
19. ಸರ್ಕಾರದ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ, ಬೆಂಗಳೂರು.
20. ಸರ್ಕಾರದ ಉಪ ಕಾರ್ಯದರ್ಶಿ-1 & 2 ರವರ ಆಪ್ತ ಸಹಾಯಕರು, ಕೃಷಿ ಇಲಾಖೆ, ಬೆಂಗಳೂರು.
21. ಶಾಖಾ ರಕ್ಷ ಕಡತ / ಹೆಚ್ಚುವರಿ ಪ್ರತಿಗಳು.

**ಸರ್ಕಾರದ ಆದೇಶ ಸಂಖ್ಯೆ:ಕೃಇ 45 ಕೃಯೋಕಾ 2019 ದಿನಾಂಕ:17-07-2019ರ ಅನುಬಂಧ-1**

**ರಾಜ್ಯದಲ್ಲಿ ಸಿರಿಧಾನ್ಯ ಬೆಳೆಗಾರರಿಗೆ ಉತ್ತೇಜನ ನೀಡಲು " ರೈತಸಿರಿ" ಯೋಜನೆಯ ಮಾರ್ಗಸೂಚಿಗಳು**

2019-20ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪಿಸಿರುವ "ಹೊಸ ಯೋಜನೆ/ಕಾರ್ಯಕ್ರಮ" ಗಳಡಿ ರಾಜ್ಯದಲ್ಲಿ 2019-20ನೇ ಸಾಲಿನಲ್ಲಿ ರಾಜ್ಯದಲ್ಲಿ ಸಿರಿಧಾನ್ಯ ಬೆಳೆಗಾರರಿಗೆ ಉತ್ತೇಜನ ನೀಡಲು "ರೈತಸಿರಿ" ಯೋಜನೆಯ ಅನುಷ್ಠಾನಕ್ಕಾಗಿ ರೂ.1000.00 ಲಕ್ಷಗಳ ಅನುದಾನವನ್ನು ಘೋಷಿಸಿರುತ್ತಾರೆ. ರಾಜ್ಯವಲಯ ಸಾವಯವ ಕೃಷಿ ಯೋಜನೆಯ ಲೆಕ್ಕ ಶೀರ್ಷಿಕೆ: 2401-00-104-0-12 ಉ.ಶೀ 106 ಅಡಿ ರೂ.812.00 ಲಕ್ಷಗಳು, ಉ.ಶೀ 422 ಅಡಿ ರೂ.113.00 ಲಕ್ಷಗಳು ಹಾಗೂ ಉ.ಶೀ 423 ಅಡಿ ರೂ.75.00 ಲಕ್ಷಗಳ ಅನುದಾನವನ್ನು ಪ್ರಸ್ತಾಪಿತ ಯೋಜನೆಯ ಅನುಷ್ಠಾನಕ್ಕಾಗಿ ಒದಗಿಸಲಾಗಿದೆ. (ಹಣಕಾಸು ಇಲಾಖೆಯ Volume-3 ರನ್ವಯ).

ಸಿರಿಧಾನ್ಯಗಳು ಇತರೆ ಏಕದಳ ಧಾನ್ಯಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಸಸಾರಜನಕ (ಪ್ರೋಟೀನ್), ನಾರಿನಾಂಶ, ಕ್ಯಾಲ್ಸಿಯಂ ಮತ್ತು ಖನಿಜಾಂಶಗಳನ್ನು ಹೊಂದಿದ್ದು ಹಾಗೂ ಆಹಾರ ಕ್ರಮದಲ್ಲಿ ವಿವಿಧ ಆಹಾರ ಪದಾರ್ಥಗಳನ್ನು ಪಡೆಯಲು ಸಾಧ್ಯವಾಗದ ಜನಸಾಮಾನ್ಯರಿಗೆ ಪೌಷ್ಠಿಕಾಂಶದ ಭದ್ರತೆಯನ್ನು ಖಾತರಿಪಡಿಸುತ್ತದೆ. ಸಿರಿಧಾನ್ಯಗಳು ಏಕದಳ ಧಾನ್ಯಗಳಿಗೆ ಹೋಲಿಸಿದರೆ ಅತ್ಯಂತ ಪೌಷ್ಠಿಕಾಂಶ ಗುಣಲಕ್ಷಣಗಳಿಂದ ಕೂಡಿದ್ದು, ಸಿರಿಧಾನ್ಯಗಳು ಶುಷ್ಕ/ಒಣ ಪರಿಸ್ಥಿತಿಗಳಲ್ಲಿ ಕಡಿಮೆ ಫಲವತ್ತತೆ ಇರುವ ಮಣ್ಣಿನಲ್ಲಿ ಬೆಳೆಯುವುದರ ಜೊತೆಗೆ ಕನಿಷ್ಠ ಕೃಷಿ ಪರಿಕರಗಳ ಅವಶ್ಯಕತೆ ಇರುತ್ತದೆ. ರಾಜ್ಯ ಸರ್ಕಾರವು ಕಳೆದ ಸಾಲುಗಳಿಂದ ರಾಜ್ಯದಲ್ಲಿ ಸಿರಿಧಾನ್ಯಗಳ ಭೆಳೆಯನ್ನು ಉತ್ತೇಜಿಸುತ್ತಿದ್ದು ಹಲವಾರು ಕಾರ್ಯಕ್ರಮಗಳ ಮುಖಾಂತರ ರೈತರಿಗೆ ಸಿರಿಧಾನ್ಯಗಳ ಬೆಳೆ ಬೆಳೆಯಲು ಮಾರ್ಗದರ್ಶನ ನೀಡಿ ಸದರಿ ಬೆಳೆಯು ಸೂಕ್ತ ಮಾರುಕಟ್ಟೆಯಲ್ಲಿ ಮಾರಾಟವಾಗಲು ಅನುವಾಗುವಂತೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮೇಳಗಳನ್ನು ಆಯೋಜಿಸಿರುತ್ತದೆ. ಈ ಮೂಲಕ ರೈತರಿಗೆ, ಉದ್ದಿಮೆದಾರರಿಗೆ ಹಾಗೂ ಗ್ರಾಹಕರಿಗೆ ಸಿರಿಧಾನ್ಯದ ಬಗ್ಗೆ ಹೆಚ್ಚಿನ ಅರಿವು ನೀಡಲಾಗಿರುತ್ತದೆ.

ಪ್ರಸಕ್ತ ಸಾಲಿನಲ್ಲಿ ಸಾವಯವ ಕೃಷಿ ಕಾರ್ಯಕ್ರಮದಡಿ ಹೊಸ ಯೋಜನೆ **"ರೈತ ಸಿರಿ"** ಯೋಜನೆಯಡಿ ಸಿರಿಧಾನ್ಯ ಬೆಳೆಗಾರರಿಗೆ (ರಾಗಿ, ಜೋಳ ಮತ್ತು ಸಜ್ಜೆ ಬೆಳೆಗಾರರನ್ನು ಹೊರತುಪಡಿಸಿ) ಪ್ರತಿ ಹೆಕ್ಟೇರ್‌ಗೆ ರೂ.10,000/-ಗಳ ನಗದು ಪ್ರೋತ್ಸಾಹ ನೀಡಲು ರೂ.1000.00 ಲಕ್ಷಗಳನ್ನು ಒದಗಿಸಲಾಗಿದೆ. ಸದರಿ ಕಾರ್ಯಕ್ರಮವನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸುವುದು ಹಾಗೆಯೇ ಪ್ರಮುಖ ಸಿರಿಧಾನ್ಯಗಳಾದ ಊದಲು, ನವಣೆ, ಹಾರಕಾ, ಕೊರಲೆ, ಸಾಮೆ ಮತ್ತು ಬರಗು ಸಿರಿಧಾನ್ಯಗಳಿಗೆ ಮಾತ್ರ ಮೀಸಲಿಡುವುದು.

ಸಿರಿಧಾನ್ಯಗಳು ಪ್ರಮುಖವಾಗಿ ಮಳೆಯಾಶ್ರಿತ ಬೆಳೆಗಳಾಗಿದ್ದು ಮುಂಗಾರು ಹಂಗಾಮಿನಲ್ಲಿ ಬೆಳೆಯಲಾಗುತ್ತದೆ. ಪ್ರಸಕ್ತ ಸಾಲಿನಲ್ಲಿ ಸದರಿ ಯೋಜನೆಯನ್ನು ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ. ಇದರಿಂದ ಹೆಚ್ಚಿನ ರೈತರು ಸಿರಿಧಾನ್ಯಗಳನ್ನು ಬೆಳೆಯಲು ಪ್ರೋತ್ಸಾಹಿಸಿದಂತಾಗುತ್ತದೆ. ಸಿರಿಧಾನ್ಯ ಬೆಳೆಯುವ ರೈತರಿಗೆ ನೇರ ಸೌಲಭ್ಯ ವರ್ಗಾವಣೆ ಮೂಲಕ (Direct Benefit Transfer) ನೇರವಾಗಿ ಅವರ ಬ್ಯಾಂಕ್ ಖಾತೆಗೆ ಪ್ರೋತ್ಸಾಹಧನ ಜಮೆ ಮಾಡಲಾಗುವುದು. ಪ್ರತಿ ಫಲಾನುಭವಿ ರೈತರಿಗೆ ಗರಿಷ್ಠ **ಎರಡು ಹೆಕ್ಟೇರ್‌ಗೆ** ಮಾತ್ರ ಸೀಮಿತವಾಗುವಂತೆ ಪ್ರೋತ್ಸಾಹಧನ ನೀಡಲಾಗುವುದು.

**"ರೈತ ಸಿರಿ "ಕಾರ್ಯಕ್ರಮದ ಮುಖ್ಯ ಉದ್ದೇಶ :**

- ರಾಜ್ಯದಲ್ಲಿನ ಸಿರಿಧಾನ್ಯಗಳ ಪ್ರದೇಶ ವಿಸ್ತರಣೆ ಹಾಗೂ ಉತ್ಪಾದನೆಯನ್ನು ಹೆಚ್ಚಿಸುವುದು.
- ಸಿರಿಧಾನ್ಯಗಳು ಪೌಷ್ಠಿಕ ಆಹಾರ, ರೈತರ ಭದ್ರತೆ, ಸುಸ್ಥಿರ ಕೃಷಿ ಮತ್ತು ಪರಿಸರದ ಸಂರಕ್ಷಣೆಗೆ ಪೂರಕವಾಗಿರುವ ಹಿನ್ನೆಲೆಯಲ್ಲಿ ಸಿರಿಧಾನ್ಯಗಳ ಬೆಳೆಯನ್ನು ಬೆಳೆಯಲು ರೈತರಿಗೆ ಪ್ರೋತ್ಸಾಹಿಸುವುದು.
- ಅತೀ ಕಡಿಮೆ ಮಳೆ ಹಾಗೂ ಕಡಿಮೆ ಫಲವತ್ತತೆಯುಳ್ಳ ಜಮೀನಿನ ಸದ್ಬಳಕೆ ಮಾಡುವುದು.
- ಸಿರಿಧಾನ್ಯಗಳ ಉತ್ಪಾದನೆಗೆ ಪೂರಕವಾದ ಸುಧಾರಿತ ತಾಂತ್ರಿಕತೆಗಳನ್ನು ಸೂಕ್ತ ಸಮಯದಲ್ಲಿ ಅಳವಡಿಸಿ ರೈತರ ಆರ್ಥಿಕ ಪರಿಸ್ಥಿತಿ ಸುಧಾರಿಸುವುದು.

**ಸಿರಿಧಾನ್ಯ ಬೆಳೆಯುವ ರೈತರಿಗೆ ಪ್ರೋತ್ಸಾಹಧನ (DBT ಮುಖಾಂತರ):**

ಸಿರಿಧಾನ್ಯ ಬೆಳೆಯುವ ರೈತರಿಗೆ ಪ್ರತಿ ಹೆಕ್ಟೇರ್‌ಗೆ 10 ಸಾವಿರ ರೂ. ನಗದು ಪ್ರೋತ್ಸಾಹಧನವನ್ನು 2 ಕಂತುಗಳಲ್ಲಿ ನೇರ ಸೌಲಭ್ಯ ವರ್ಗಾವಣೆ ಮೂಲಕ (Direct Benefit Transfer) ರೈತರ ಬ್ಯಾಂಕ್ ಖಾತೆಗೆ ಜಮೆ ಮಾಡುವ ಮೂಲಕ ಹೆಚ್ಚಿನ ರೈತರು ಸಿರಿಧಾನ್ಯಗಳನ್ನು ಬೆಳೆಯಲು ಪ್ರೋತ್ಸಾಹಿಸುವುದು.

- **ಊದಲು, ನವಣೆ, ಹಾರಕ, ಕೊರಲೆ, ಸಾಮೆ ಮತ್ತು ಬರಗು** ಸಿರಿಧಾನ್ಯಗಳಿಗೆ ಮಾತ್ರ ಒತ್ತು ನೀಡುವುದು.
- **ಮೊದಲ ಕಂತಿನ ಪ್ರೋತ್ಸಾಹಧನ ರೂ.6000/-ಗಳನ್ನು** ಸಿರಿಧಾನ್ಯ ಬೆಳೆ ಬಿತ್ತನೆ ಮಾಡಿದ **30** ದಿನಗಳ ನಂತರ ಸಿರಿಧಾನ್ಯ ಬೆಳೆಯ ಜಿಪಿಎಸ್ ಆಧಾರಿತ ಛಾಯಾಚಿತ್ರವನ್ನು ಪರಿಶೀಲಿಸಿ ರೈತರಿಗೆ ನೇರ ಸೌಲಭ್ಯ ವರ್ಗಾವಣೆ ಮೂಲಕ (Direct Benefit Transfer) ರೈತರ ಬ್ಯಾಂಕ್ ಖಾತೆಗೆ ಪ್ರೋತ್ಸಾಹಧನ ಜಮೆ ಮಾಡುವುದು.
- **ಎರಡನೇ ಕಂತಿನ ಪ್ರೋತ್ಸಾಹಧನ ರೂ.4000/-ಗಳನ್ನು** ರೈತರಿಗೆ ನೇರ ಸೌಲಭ್ಯ ವರ್ಗಾವಣೆ ಮೂಲಕ (Direct Benefit Transfer) ರೈತರ ಬ್ಯಾಂಕ್ ಖಾತೆಗೆ ಜಮೆ ಮಾಡುವುದು.
- ಫಲಾನುಭವಿ ರೈತರುಗಳಿಂದ ಮುಂಗಡ ಹಣ ಸಂದ ರಸೀದಿಯನ್ನು ಎರಡು ಕಂತುಗಳಿಗೆ ಪ್ರತ್ಯೇಕವಾಗಿ ಒಮ್ಮೆಲೆ ಪಡೆಯುವುದು.
- ಪ್ರತಿ ಫಲಾನುಭವಿ ರೈತರಿಗೆ ಗರಿಷ್ಠ ಎರಡು ಹೆಕ್ಟೇರ್‌ಗೆ ಮಾತ್ರ ಸೀಮಿತವಾಗುವಂತೆ ಪ್ರೋತ್ಸಾಹಧನ ನೀಡುವುದು.
- ಫಲಾನುಭವಿಗಳು ಹೊಂದಿರುವ ವಿಸ್ತೀರ್ಣಕ್ಕೆ ಸಮನಾಗಿ ಪ್ರೋತ್ಸಾಹಧನ ನೀಡುವುದು.
- ಜಿಲ್ಲೆವಾರು ನಿಗಧಿಪಡಿಸಿರುವ ಭೌತಿಕ ಹಾಗೂ ಆರ್ಥಿಕ ಗುರಿಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ.
- ಜಿಲ್ಲೆಗಳಿಂದ ತಾಲ್ಲೂಕೂವಾರು ನಿಗದಿಪಡಿಸಿರುವ ಗುರಿಯನ್ನು ಕೇಂದ್ರ ಕಛೇರಿಗೆ ಕಡ್ಡಾಯವಾಗಿ ಸಲ್ಲಿಸುವುದು.
- ಸದರಿ ಯೋಜನೆಯನ್ನು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ **(RKVY)** ಹಾಗೂ ಇನ್ನಿತರೆ ಸಮಾನ ಯೋಜನೆಗಳೊಂದಿಗೆ **Convergence** ನೊಂದಿಗೆ ಅನುಷ್ಠಾನಗೊಳಿಸುವುದು.

**ಫಲಾನುಭವಿಗಳ ಅರ್ಹತೆ:**

- ಫಲಾನುಭವಿಗಳು ರೈತರಾಗಿದ್ದು ಜಮೀನು ಅವರ ಹೆಸರಿನಲ್ಲಿರಬೇಕು. ಜಂಟಿ ಖಾತೆಯಾಗಿದ್ದಲ್ಲಿ ಇತರೆ ಖಾತೆದಾರರ ಒಪ್ಪಿಗೆ ಪತ್ರ ಪಡೆದಿರಬೇಕು. ತಂದೆ ಅಥವಾ ತಾಯಿ ಹೆಸರಿನಲ್ಲಿ ಜಮೀನಿದ್ದು, ಅವರು ಮರಣ ಹೊಂದಿದ್ದಲ್ಲಿ ಮಾತ್ರ ಗ್ರಾಮಲೆಕ್ಕಿಗರಿಂದ ದೃಢೀಕರಿಸಿ, ಕುಟುಂಬದ ಇತರೆ ಸದಸ್ಯರಿಂದ ಒಪ್ಪಿಗೆ ಪಡೆದು ತಮ್ಮ ಹೆಸರಿನಲ್ಲಿ ಅರ್ಜಿ ಸಲ್ಲಿಸುವುದು.
- ಮಹಿಳೆಯ ಹೆಸರಿನಲ್ಲಿ ಖಾತೆ ಹೊಂದಿದ್ದು, ಕುಟುಂಬದ ಇತರೆ ಪುರುಷ ಸದಸ್ಯರ ಹೆಸರಿನಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ ಯಾವುದೇ ಕಾರಣಕ್ಕೂ ಮಾನ್ಯ ಮಾಡಬಾರದು. ಮಹಿಳೆಯರ ಹೆಸರಿನಲ್ಲಿಯೇ ಅರ್ಜಿ ಸಲ್ಲಿಸುವುದನ್ನು ಉತ್ತೇಜಿಸಬೇಕು.
- ಫಲಾನುಭವಿ ರೈತರು ಸಿರಿಧಾನ್ಯಗಳಾದ **ಊದಲು, ನವಣೆ, ಹಾರಕಾ, ಕೊರಲೆ, ಸಾಮೆ ಮತ್ತು ಬರಗು** ಸಿರಿಧಾನ್ಯಗಳನ್ನು ಪ್ರಮುಖ ಬೆಳೆಯಾಗಿ ಬೆಳೆದಿರಬೇಕು.

**ಫಲಾನುಭವಿಗಳ ಆಯ್ಕೆ:**

1. ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರು ತಮ್ಮ ಜಿಲ್ಲೆಗೆ ನೀಡಿರುವ ಗುರಿಯನ್ವಯ ತಾಲ್ಲೂಕುವಾರು ಗುರಿ ನಿಗದಿಪಡಿಸುವುದು.
2. ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು ಈ ಯೋಜನೆಯ ಬಗ್ಗೆ ಸ್ಥಳೀಯ ಪತ್ರಿಕೆಯಲ್ಲಿ ರೈತರಿಗೆ ಮಾಹಿತಿ ನೀಡಿ ರೈತರು ಸಂಬಂಧಿಸಿದ ರೈತ ಸಂಪರ್ಕ ಕೇಂದ್ರಗಳಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಗಡುವು ನೀಡುವುದು.
3. ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳು ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಯೋಜನೆಯ ಮಾಹಿತಿಯನ್ನು ಪ್ರಚುರ ಪಡಿಸಿ ಆಸಕ್ತ ರೈತರ ಹೆಸರುಗಳನ್ನು ನೋಂದಾಯಿಸಿಕೊಳ್ಳುವುದು. ರೈತರಿಂದ ಪಹಣಿ, ರೈತರ ಬ್ಯಾಂಕ್ ಪಾಸ್ ಪುಸ್ತಕದ ನೆರಳಚ್ಚು, ಆಧಾರಕಾರ್ಡ್ ನೆರಳಚ್ಚು, ಪ.ಜಾ./ಪ.ಪಂ ರೈತರಾದಲ್ಲಿ ಜಾತಿ ಪ್ರಮಾಣ ಪತ್ರದ ದಾಖಲೆಗಳನ್ನು ಕಡ್ಡಾಯವಾಗಿ ಪಡೆಯುವುದು.
4. ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿಗಳು/ಸಕೃಅ/ಎಟಿಎಮ್/ಬಿಟಿಎಮ್‌ರವರು ನೋಂದಾಯಿಸಿದ ರೈತರ ಜಮೀನಿಗೆ ಭೇಟಿ ನೀಡಿ ಜಿಪಿಎಸ್ ಆಧಾರಿತ ಛಾಯಾಚಿತ್ರವನ್ನು ದಾಖಲಿಸಿಕೊಳ್ಳುವುದು. ತದನಂತರ ರೈತರ ದಾಖಲೆಯನ್ವಯ ಜಮೀನು ವಿಸ್ತೀರ್ಣ ಹೊಂದಾಣಿಕೆಯಾಗುವುದನ್ನು ಖಾತರಿಪಡಿಸಿಕೊಳ್ಳುವುದು.
5. ಬಿತ್ತನೆ ಸಮಯದಲ್ಲಿ ನೋಂದಾಯಿತ ರೈತರಿಗೆ ಸಂಬಂಧಿಸಿದ ಸಿರಿಧಾನ್ಯ ಬೆಳೆಯ ಬೇಸಾಯ ಕ್ರಮಗಳ ಬಗ್ಗೆ ಮಾಹಿತಿ ಒದಗಿಸತಕ್ಕದ್ದು. ಎಲ್ಲಿ ಎಲ್ಲಿ ಸಾಧ್ಯವೋ ಅಲ್ಲಿ ಲಭ್ಯವಾಗುವ ದೃಢೀಕೃತ ಬಿತ್ತನೆ ಬೀಜಗಳನ್ನು ಬಳಸಲು ಪ್ರೇರೇಪಿಸುವುದು ಹಾಗೂ ಬಿತ್ತನೆ ಬೀಜವನ್ನು ರೈತ ಸಂಪರ್ಕ ಕೇಂದ್ರಗಳಲ್ಲಿ ದಾಸ್ತಾನು ಮಾಡಲು ಕ್ರಮ ಕೈಗೊಳ್ಳುವುದು.
6. ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ (ZBNF) ಕಾರ್ಯಕ್ರಮದಡಿ ನಿಯುಕ್ತಿಗೊಳಿಸಲಾಗಿರುವ Community Assistant (CA)ಮತ್ತು Community Resource Person (CRP)ಗಳ ಹಾಗೆಯೇ ಆತ್ಮ ಯೋಜನೆಯಡಿಯ ATM ಮತ್ತು BTM ಗಳ ಸಹಯೋಗದೊಂದಿಗೆ ಬಿತ್ತನೆಯಾದ ವಿಸ್ತೀರ್ಣದ ಜಿಪಿಎಸ್ ಆಧಾರಿತ ಛಾಯಾಚಿತ್ರ ಸಮೇತ ದಾಖಲೆ ನಿರ್ವಹಿಸುವುದು.
7. ಬಿತ್ತನೆ ಅವಧಿ ಪೂರ್ಣಗೊಂಡ ಕೂಡಲೇ ತಮ್ಮ ವ್ಯಾಪ್ತಿಯ ಬಿತ್ತನೆಯಾದ ಪ್ರದೇಶದ ಮಾಹಿತಿಯೊಂದಿಗೆ ಅರ್ಹ ರೈತರಿಗೆ ಸರ್ಕಾರದ ಪ್ರೋತ್ಸಾಹಧನ ಪಾವತಿಸಲು ಬಿಲ್ ತಯಾರಿಸಿ ಸಹಾಯಕ ಕೃಷಿ ನಿರ್ದೇಶಕರುಗಳಿಗೆ ಸಲ್ಲಿಸುವುದು.

8. ತಮ್ಮ ಜಿಲ್ಲೆಗೆ ನೀಡಿರುವ ಗುರಿಯನ್ವಯ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 10-08-2019 ಇರುತ್ತದೆ.
9. ಕಾನೂನು ರೀತ್ಯ ಪ.ಜಾ./ಪ.ಪಂ./ಅಲ್ಪಸಂಖ್ಯಾತರು/ಮಹಿಳೆಯರು/ಹಿಂದುಳಿದ ವರ್ಗದ ರೈತರಿಗೆ ಆದ್ಯತೆ ನೀಡುವುದು.

**ಜವಾಬ್ದಾರಿಗಳು:**

1. **ಯೋಜನೆ ಅನುಷ್ಠಾನದಲ್ಲಿ CA/CRP/ATM/BTM ಗಳ ಪಾತ್ರ**
   - ಜಿಲ್ಲೆಯಲ್ಲಿ ZBNF ಯೋಜನೆಯ CA/CRPಯು ಹಾಗೆಯೇ ಆತ್ಮ ಯೋಜನೆಯ ATM ಮತ್ತು BTM ಗಳ ಸೇವೆಯನ್ನು ರೈತಸಿರಿ ಯೋಜನೆಯ ಪರಿಕಲ್ಪನೆಯ ಬಗ್ಗೆ ರೈತರಲ್ಲಿ ಅರಿವು ಮೂಡಿಸಲು ಬಳಸಿಕೊಳ್ಳುವುದು
   - ZBNF ಪ್ರದೇಶದಲ್ಲಿ "ರೈತಸಿರಿ" ಕಾರ್ಯಕ್ರಮ ಅನುಷ್ಠಾನವಾದಲ್ಲಿ ಸಂಬಂಧಿಸಿದ **CA/CRP**ಗಳೇ ರೈತಸಿರಿ ಯೋಜನೆಯಡಿಯಲ್ಲಿಯೂ ಪ್ರತಿನಿಧಿಯಾಗಿರುತ್ತಾರೆ.
   - ZBNF ಪ್ರದೇಶದ **ಹೊರಗೆ** ರೈತಸಿರಿ ಕಾರ್ಯಕ್ರಮ ಅನುಷ್ಠಾನವಾದಲ್ಲಿ ಸಂಬಂಧಿಸಿದ ATM ಮತ್ತು BTM ಗಳು ಪ್ರತಿನಿಧಿಯಾಗಿರುತ್ತಾರೆ.
   - **CA/CRP** ಯು ಅಥವಾ ATM/BTM ಗಳು ಆಯ್ಕೆಯಾಗುವ ಸಂಬಂಧಿಸಿದ ಯೋಜನಾ ಪ್ರದೇಶದ ಫಲಾನುಭವಿಗಳ ಆಯ್ಕೆ ಮಾಡುವುದು ಹಾಗೂ ಫಲಾನುಭವಿಗಳ ದಾಖಲಾತಿಗಳನ್ನು ಸಂಗ್ರಹಿಸುವುದು.
   - **CA/CRP**ಯು ಅಥವಾ ATM/BTM ಗಳು ಯೋಜನಾ ಪ್ರದೇಶದ ವ್ಯಾಪ್ತಿಯ ಪ್ರತಿ ಫಲಾನುಭವಿಯ ಕ್ಷೇತ್ರಗಳಿಗೆ ನಿಯಮಿತವಾಗಿ ಭೇಟಿ ನೀಡುವುದು ಮತ್ತು ಆ ಪ್ರದೇಶಕ್ಕೆ ಸೂಕ್ತ ಬೆಳೆ ಪದ್ಧತಿ ಅನುಸರಿಸಿರುವುದನ್ನು ಖಾತರಿ ಪಡಿಸಿಕೊಳ್ಳುವುದು.
   - **CA/CRP**ಯು ಅಥವಾ ATM/BTM ಗಳು ಬಿತ್ತನೆಯಾದ ವಿಸ್ತೀರ್ಣದ ಜಿಪಿಎಸ್ ಆಧಾರಿತ ಛಾಯಾಚಿತ್ರ ಸಮೇತ ದಾಖಲೆ ನಿರ್ವಹಿಸುವುದು.
   - ಕೃಷಿ ಅಧಿಕಾರಿ/ಸಹಾಯಕ ಕೃಷಿ ನಿರ್ದೇಶಕರು ಸೂಚಿಸಿದ ಇತರೆ ಕಾರ್ಯಗಳನ್ನು ನಿರ್ವಹಿಸುವುದು.

2. **ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ/ಸಹಾಯಕ ಕೃಷಿ ಅಧಿಕಾರಿಗಳು**
   - **ಈ ಯೋಜನೆಯಡಿ ಪ್ರಯೋಜನ ಪಡೆಯುವ ರೈತರ ಹೆಸರನ್ನು** FRUITS ತಂತ್ರಜ್ಞಾನದಲ್ಲಿ ಕಡ್ಡಾಯವಾಗಿ ನೋಂದಾಯಿಸಿರಬೇಕು.
   - **CA/CRP**ಗಳು ಅಥವಾ ATM/BTM ಗಳು ಒದಗಿಸುವ ಆಯ್ಕೆಯಾದ ರೈತರು FRUITS ತಂತ್ರಜ್ಞಾನದಲ್ಲಿ ನೋಂದಾಯಿತರಾಗದಿದ್ದಲ್ಲಿ ರೈತರ ದಾಖಲಾತಿಗಳನ್ನು ಪರಿಶೀಲಿಸಿ ಕಡ್ಡಾಯವಾಗಿ FRUITS ತಂತ್ರಜ್ಞಾನದಲ್ಲಿ ಅಳವಡಿಸುವುದು.
   - ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು ನೀಡುವ ಗುರಿಗೆ ಅನುಗುಣವಾಗಿ ಹೋಬಳಿ ಕ್ರಿಯಾ ಯೋಜನೆಯನ್ನು ತಯಾರಿಸಿ ಸಲ್ಲಿಸುವುದು.
   - ಬಿತ್ತನೆ ನಂತರ ಫಲಾನುಭವಿ ತಾಕುಗಳಿಗೆ ಭೇಟಿ ನೀಡಿ ಬೆಳೆ ಬಿತ್ತನೆಯಾಗಿರುವ ಬಗ್ಗೆ ಶೇ. 100 ರಷ್ಟು ಪರಿಶೀಲನೆ ಕೈಗೊಂಡು ಖಚಿತಪಡಿಸಿಕೊಳ್ಳುವುದು.

- **CA/CRP**ಗಳು ಅಥವಾ ATM/BTM ಗಳ ದಿನಚರಿ ಪರಿಶೀಲಿಸುವುದು ಮತ್ತು ಧೃಢೀಕರಿಸುವುದು.
- CA/CRPಗಳು ಅಥವಾ ATM/BTM ಗಳ ಕಾರ್ಯನಿರ್ವಹಣೆಯ ಕುರಿತು ಮಾಹೆವಾರು ತೃಪ್ತಿಕರ ಪ್ರಮಾಣ ಪತ್ರವನ್ನು ಸಹಾಯಕ ಕೃಷಿ ನಿರ್ದೇಶಕರಿಗೆ ಸಲ್ಲಿಸುವುದು.

**3. ಸಹಾಯಕ ಕೃಷಿ ನಿರ್ದೇಶಕರು**

- ಯೋಜನೆಯ ಬಗ್ಗೆ ತಾಲ್ಲೂಕಿನಾದ್ಯಂತ ವ್ಯಾಪಕ ಪ್ರಚಾರ ಕೈಗೊಳ್ಳುವುದು, ಸ್ಥಳೀಯ ಪತ್ರಿಕೆಗಳಲ್ಲಿ ಯೋಜನೆ ಬಗ್ಗೆ ಜೂನ್-2019 ಮಾಹೆಯ ಅಂತ್ಯದೊಳಗೆ ಪ್ರಕಟಣೆ ನೀಡುವುದು. ಪತ್ರಿಕಾ ಪ್ರಕಟಣೆಯ ಪ್ರತಿಯನ್ನು ಸಹಾಯಕ ಕೃಷಿ ನಿರ್ದೇಶಕರ ಕಛೇರಿ ಮತ್ತು ಹೋಬಳಿ ರೈತ ಸಂಪರ್ಕ ಕೇಂದ್ರ ಸೂಚನಾ ಫಲಕದಲ್ಲಿ ಪ್ರಕಟಿಸುವುದು.
- ಇದೇ ಪ್ರತಿಯನ್ನು ತಾಲ್ಲೂಕು ಮತ್ತು ಹೋಬಳಿ ಮಟ್ಟದ ಇತರೆ ಇಲಾಖೆಗಳ ಕಛೇರಿಗಳ ಸೂಚನಾ ಫಲಕಗಳಲ್ಲಿ ಪ್ರಕಟಿಸತಕ್ಕದ್ದು.
- ಹೋಬಳಿ ರೈತ ಸಂಪರ್ಕ ಕೇಂದ್ರಗಳಿಂದ ಸ್ವೀಕೃತವಾಗುವ ಕ್ರಿಯಾ ಯೋಜನೆಯನ್ನು ಪರಿಶೀಲಿಸಿ ತಾಲ್ಲೂಕು ಕ್ರಿಯಾ ಯೋಜನೆ ತಯಾರಿಸಿ ಉಪ ಕೃಷಿ ನಿರ್ದೇಶಕರುಗಳಿಗೆ ಸಲ್ಲಿಸುವುದು. ತಾಲ್ಲೂಕಿನಲ್ಲಿ ಬಿತ್ತನೆಯಾದ ಸಿರಿಧಾನ್ಯಗಳ ಪ್ರದೇಶದ ಶೇ.20 ರಷ್ಟು ಪರಿಶೀಲನೆ ಕೈಗೊಂಡು ಛಾಯಾ ಚಿತ್ರಗಳನ್ನು ದಾಖಲಿಸಿಕೊಳ್ಳುವುದು.
- ಜಂಟಿ ಕೃಷಿ ನಿರ್ದೇಶಕರುಗಳಿಂದ ಬಿಡುಗಡೆಯಾಗುವ ಅನುದಾನವನ್ನು ತಡಮಾಡದೇ ಫಲಾನುಭವಿಗಳ ಖಾತೆಗೆ ಜಮಾ ಮಾಡಿ ಆರ್ಥಿಕ ಪ್ರಗತಿ ಸಾಧಿಸುವುದು.

**4. ಉಪ ಕೃಷಿ ನಿರ್ದೇಶಕರು**

- ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರುಗಳಿಂದ ಸ್ವೀಕರಿಸಿದ ಕ್ರಿಯಾ ಯೋಜನೆಯನ್ನು ಕ್ರೂಢೀಕರಿಸಿ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ ಸಲ್ಲಿಸುವುದು.
- ತಾಲ್ಲೂಕು/ಹೋಬಳಿಗಳಿಗೆ ಭೇಟಿ ನೀಡಿದಾಗ ಸಿರಿಧಾನ್ಯ ಬೆಳೆ ಬಿತ್ತನೆಯಾಗಿರುವ ಪ್ರದೇಶದ ಶೇ 5 ರಷ್ಟು ಪ್ರದೇಶದ ಅನಿಯತ ತಪಾಸಣೆ ಕೈಗೊಂಡು ಛಾಯಾ ಚಿತ್ರಗಳನ್ನು ದಾಖಲಿಸಿಕೊಳ್ಳುವುದು.

**5. ಜಂಟಿ ಕೃಷಿ ನಿರ್ದೇಶಕರು**

- ಜಿಲ್ಲಾ ಮಟ್ಟದಲ್ಲಿ ಫಲಾನುಭವಿಗಳ ಅನುಷ್ಠಾನದ ಕುರಿತು ಶೇ.2 ರಷ್ಟು ಅನಿಯತ ತಪಾಸಣೆ ಕೈಗೊಳ್ಳುವುದು.
- ಕೇಂದ್ರ ಕಛೇರಿಯಿಂದ ಬಿಡುಗಡೆಯಾಗುವ ಅನುದಾನವನ್ನು ತಾಲ್ಲೂಕುವಾರು ಕ್ರಿಯಾಯೋಜನೆ ಅನುಸಾರ ಕೂಡಲೇ ಬಿಡುಗಡೆ ಮಾಡಿ ಸಕಾಲದಲ್ಲಿ ಪ್ರಗತಿ ಸಾಧಿಸಲು ಕ್ರಮ ಕೈಗೊಳ್ಳುವುದು.
- ಯೋಜನೆಯ ಅನುಷ್ಠಾನದ ಶೇ.100 ರಷ್ಟು ಉಸ್ತುವಾರಿ ಕೈಗೊಳ್ಳುವುದು.

BS Nagaratnam
(ಬಿ.ಎಸ್.ನಾಗರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ(ಯೋಜನೆ).
17/7/2019

ಸರ್ಕಾರದ ಆದೇಶ ಸಂಖ್ಯೆ:ಕೃಇ 45 ಕೃಯೋಕಾ 2019 ದಿನಾಂಕ:17-07-2019ರ ಅನುಬಂಧ-2

2019-20 ನೇ ಸಾಲಿನಲ್ಲಿ ಸಿರಿಧಾನ್ಯ ಬೆಳೆಗಾರರಿಗೆ ಉತ್ತೇಜನ ನೀಡಲು "ರೈತ ಸಿರಿ-2019" ಕಾರ್ಯಕ್ರಮದ ಜಿಲ್ಲಾವಾರು ಭೌತಿಕ ಹಾಗೂ ಆರ್ಥಿಕ ಗುರಿ

| ಕ್ರ. ಸಂ | ಜಿಲ್ಲೆ | ಸಾಮಾನ್ಯ(106) | | ವಿಶೇಷ ಘಟಕ ಯೋಜನೆ (422) | | ಗಿರಿ ಜನ ಉಪಯೋಜನೆ (423) | | ಒಟ್ಟು | |
|---|---|---|---|---|---|---|---|---|---|
| | | ಭೌತಿಕ(ಹೆ) | ಆರ್ಥಿಕ (ರೂ. ಲಕ್ಷಗಳಲ್ಲಿ) | ಭೌತಿಕ (ಹೆ) | ಆರ್ಥಿಕ(ರೂ. ಲಕ್ಷಗಳಲ್ಲಿ) | ಭೌತಿಕ (ಹೆ) | ಆರ್ಥಿಕ (ರೂ. ಲಕ್ಷಗಳಲ್ಲಿ) | ಭೌತಿಕ (ಹೆ) | ಆರ್ಥಿಕ (ರೂ. ಲಕ್ಷಗಳಲ್ಲಿ) |
| 1 | ಬಾಗಲಕೋಟೆ | 102.1 | 10.21 | 20.2 | 2.02 | 12.6 | 1.26 | 135.0 | 13.50 |
| 2 | ಬೆಂಗಳೂರು.ಗ್ರಾ | 18.2 | 1.82 | 2.3 | 0.23 | 1.7 | 0.17 | 22.2 | 2.22 |
| 3 | ಬೆಂಗಳೂರು ನಗರ | 13.6 | 1.36 | 1.7 | 0.17 | 0.8 | 0.08 | 16.2 | 1.62 |
| 4 | ಬೆಳಗಾವಿ | 385.8 | 38.58 | 52.0 | 5.20 | 21.1 | 2.11 | 458.9 | 45.89 |
| 5 | ಬಳ್ಳಾರಿ | 1702.1 | 170.21 | 115.7 | 11.57 | 84.3 | 8.43 | 1902.0 | 190.20 |
| 6 | ಬೀದರ್ | 113.5 | 11.35 | 23.1 | 2.31 | 16.9 | 1.69 | 153.5 | 15.35 |
| 7 | ಚಾಮರಾಜನಗರ | 56.7 | 5.67 | 11.6 | 1.16 | 8.4 | 0.84 | 76.7 | 7.67 |
| 8 | ಚಿಕ್ಕಬಳ್ಳಾಪುರ | 181.6 | 18.16 | 25.0 | 2.50 | 16.9 | 1.69 | 223.4 | 22.34 |
| 9 | ಚಿ.ಮಗಳೂರು | 226.9 | 22.69 | 31.2 | 3.12 | 12.6 | 1.26 | 270.8 | 27.08 |
| 10 | ಚಿತ್ರದುರ್ಗಾ | 2609.8 | 260.98 | 462.6 | 46.26 | 311.0 | 31.10 | 3383.4 | 338.34 |
| 11 | ದಕ್ಷಿಣ ಕನ್ನಡ | 2.3 | 0.23 | 0.0 | 0.00 | 0.0 | 0.00 | 2.3 | 0.23 |
| 12 | ದಾವಣಗೆರೆ | 147.5 | 14.75 | 20.8 | 2.08 | 16.9 | 1.69 | 185.2 | 18.52 |
| 13 | ಧಾರವಾಡ | 181.6 | 18.16 | 23.1 | 2.31 | 16.9 | 1.69 | 221.5 | 22.15 |
| 14 | ಗದಗ | 90.8 | 9.08 | 17.3 | 1.73 | 10.1 | 1.01 | 118.2 | 11.82 |
| 15 | ಕಲ್ಬುರ್ಗಿ | 158.9 | 15.89 | 34.7 | 3.47 | 33.7 | 3.37 | 227.3 | 22.73 |
| 16 | ಹಾಸನ | 158.9 | 15.89 | 11.6 | 1.16 | 4.2 | 0.42 | 174.6 | 17.46 |
| 17 | ಹಾವೇರಿ | 192.9 | 19.29 | 23.1 | 2.31 | 10.1 | 1.01 | 226.1 | 22.61 |
| 18 | ಕೊಡಗು | 5.7 | 0.57 | 0.0 | 0.00 | 0.0 | 0.00 | 5.7 | 0.57 |
| 19 | ಕೋಲಾರ | 124.8 | 12.48 | 17.3 | 1.73 | 8.4 | 0.84 | 150.6 | 15.06 |
| 20 | ಕೊಪ್ಪಳ | 453.9 | 45.39 | 63.6 | 6.36 | 16.9 | 1.69 | 534.4 | 53.44 |
| 21 | ಮಂಡ್ಯ | 56.7 | 5.67 | 6.9 | 0.69 | 4.2 | 0.42 | 67.9 | 6.79 |
| 22 | ಮೈಸೂರು | 68.1 | 6.81 | 8.7 | 0.87 | 4.2 | 0.42 | 81.0 | 8.10 |
| 23 | ರಾಯಚೂರು | 68.1 | 6.81 | 11.6 | 1.16 | 33.7 | 3.37 | 113.4 | 11.34 |
| 24 | ರಾಮನಗರ | 34.0 | 3.40 | 3.5 | 0.35 | 3.4 | 0.34 | 40.9 | 4.09 |
| 25 | ಶಿವಮೊಗ್ಗ | 11.3 | 1.13 | 0.0 | 0.00 | 0.0 | 0.00 | 11.3 | 1.13 |
| 26 | ತುಮಕೂರು | 567.4 | 56.74 | 78.1 | 7.81 | 59.0 | 5.90 | 704.4 | 70.44 |
| 27 | ಉಡುಪಿ | 2.3 | 0.23 | 0.0 | 0.00 | 0.0 | 0.00 | 2.3 | 0.23 |
| 28 | ಉತ್ತರ ಕನ್ನಡ | 11.3 | 1.13 | 0.0 | 0.00 | 0.0 | 0.00 | 11.3 | 1.13 |
| 29 | ವಿಜಯಪುರ | 305.2 | 30.52 | 46.7 | 4.67 | 25.3 | 2.53 | 377.2 | 37.72 |
| 30 | ಯಾದಗಿರಿ | 68.0 | 6.80 | 17.6 | 1.76 | 16.7 | 1.67 | 102.3 | 10.23 |
| | ಒಟ್ಟು | 8120 | 812 | 1130 | 113 | 750 | 75 | 10000 | 1000.00 |

B S Nagarathnam

(ಬಿ.ಎಸ್.ನಾಗರತ್ನಮ್ಮ)

ಸರ್ಕಾರದ ಅಧೀನ ಕಾರ್ಯದರ್ಶಿ,

ಕೃಷಿ ಇಲಾಖೆ(ಯೋಜನೆ).

17/7/2019

## ಅರ್ಜಿ ನಮೂನೆ

(ಸರ್ಕಾರದ ಆದೇಶ ಸಂಖ್ಯೆ:ಕೃಇ 45 ಕೃಯೋಕಾ 2019 ದಿನಾಂಕ:17-07-2019ರ ಅನುಬಂಧ-3)

ಭಾವಚಿತ್ರ

| ಕ್ರ.ಸಂ | ವಿವರ | | | | |
|---|---|---|---|---|---|
| 1. | ರೈತನ ಹೆಸರು | | | | |
| 2. | ತಂದೆ/ಗಂಡನ ಹೆಸರು | | | | |
| 3. | ವಿಳಾಸ | ಗ್ರಾಮ | | | |
| | | ಹೋಬಳಿ | | | |
| | | ತಾಲ್ಲೂಕು | | | |
| | | ಜಿಲ್ಲೆ | | | |
| 4. | ರೈತರ ದೂರವಾಣಿ ಸಂಖ್ಯೆ | | | | |
| 5. | ರೈತರ ವಯಸ್ಸು/ವಿದ್ಯಾರ್ಹತೆ | | | | |
| 6. | ರೈತರ ಆಧಾರ್ ಸಂಖ್ಯೆ | | | | |
| 7. | ರೈತರಖಾತೆ ಸಂಖ್ಯೆ/ಬ್ಯಾಂಕಿನ ಹೆಸರು ಮತ್ತು ಶಾಖೆ/ಐಎಫ್‌ಎಸ್‌ಸಿ ಕೋಡ್ | | | | |
| 8. | ರೈತರ ವರ್ಗ | ಪ.ಜಾ./ಪ.ಪಂ/ಮಹಿಳೆ/ಅಲ್ಪಸಂಖ್ಯಾತರು/ಹಿಂದುಳಿದ ವರ್ಗದವರು- ಪ.ಜಾ./ಪ.ಪಂ. ರೈತರಾದಲ್ಲಿ ಜಾತಿ ಪ್ರಮಾಣ ಪತ್ರ ಲಗತ್ತಿಸಬೇಕು | | | |
| 9. | ಬೆಳೆ/ತಳಿ | | | | |
| | ಬಿತ್ತನೆ ದಿನಾಂಕ | | | | |
| 10. | ಸಿರಿಧಾನ್ಯ ಬೆಳೆಗೆ ಒಳಪಡಿಸುವ ಹಿಡುವಳಿ ವಿವರ(ಹೆ)-ಪಹಣಿ ಪ್ರತಿ ಲಗತ್ತಿಸಬೇಕು | ಬೆಳೆ | ಜಮೀನಿನ ವಿಧ(ಖುಷ್ಕಿ /ನೀರಾವರಿ) | ಸರ್ವೆ ನಂ. | ವಿಸ್ತೀರ್ಣ(ಹೆ) |
| | | | | | |

### ದೃಡೀಕರಣ

ಮೇಲೆ ಸಲ್ಲಿಸಿರುವ ಎಲ್ಲಾ ವಿವರಗಳು ಸತ್ಯದಿಂದ ಕೂಡಿದೆ ಎಂದು ಪ್ರಮಾಣೀಕರಿಸುತ್ತೇನೆ. ಒಂದು ವೇಳೆ ಸಲ್ಲಿಸಿರುವ ವಿವರಗಳು ಸತ್ಯಕ್ಕೆ ದೂರವಾಗಿದ್ದಲ್ಲಿ ನಾನು ಪಡೆದಿರುವ ಪ್ರೋತ್ಸಾಹಧನವನ್ನು ಸರ್ಕಾರಕ್ಕೆ ಹಿಂದಿರುಗಿಸುವಲ್ಲಿ ಬದ್ಧನಾಗಿರುತ್ತೇನೆ. ಸರ್ಕಾರದಿಂದ ಸಿಗುವ ಪ್ರೋತ್ಸಾಹಧನವನ್ನು ಆಧಾರ್ ಲಿಂಕ್ ಆಗಿರುವ ನನ್ನ____________ ಬ್ಯಾಂಕ್ ____________ಶಾಖೆಯ ____________ ಖಾತೆ ಸಂಖ್ಯೆಗೆ RTGS/NEFT ಮುಖಾಂತರ ವರ್ಗಾಯಿಸಲುಕೋರುತ್ತೇನೆ.

ಸ್ಥಳ:

ರೈತರ ಹೆಸರು ಮತ್ತು ಸಹಿ:

ದಿನಾಂಕ

ಅರ್ಜಿ ನಮೂನೆ

(ಸರ್ಕಾರದ ಆದೇಶ ಸಂಖ್ಯೆ:ಕೃಇ 45 ಕೃಯೋಕಾ 2019 ದಿನಾಂಕ:17-07-2019ರ ಅನುಬಂಧ-4)

| | | |
|---|---|---|
| 1. | CA/CRP/ATM/BTM, ಕ್ಷೇತ್ರ ಭೇಟಿ ನೀಡಿ ತೆಗೆದ ಜಿಯೋಟ್ಯಾಗಿಂಗ್ ಫೋಟೋ ವಿವರ (2 ಹಂತ) | 1. ಬಿತ್ತನೆಯಾದ 30 ದಿನಗಳ ನಂತರದ ಹಾಗೂ ಕಟಾವಿನ ಮೊದಲಿನ ಛಾಯಾಚಿತ್ರ ಲಗತ್ತಿಸುವುದು.<br><br>ಅಕ್ಷಾಂಶ: ರೇಖಾಂಶ: |
| 2. | ಸದರಿ ರೈತರ ಜಮೀನಿನಲ್ಲಿ ಸಿರಿಧಾನ್ಯ ಬೆಳೆ ಬಿತ್ತನೆಯಾಗಿರುವ ಬಗ್ಗೆ ಕೃಷಿ ಅಧಿಕಾರಿ ಅಭಿಪ್ರಾಯ ಹಾಗೂ ಷರಾ | |
| 3. | ಪ್ರೋತ್ಸಾಹಧನ ನೀಡುವಲ್ಲಿ ಸಹಾಯಕ ಕೃಷಿ ನಿರ್ದೇಶಕರ ಅಭಿಪ್ರಾಯ ಹಾಗೂ ಷರಾ | |

ಬಿತ್ತನೆಯಾದ 30 ದಿನಗಳ ನಂತರದ ಹಾಗೂ ಕಟಾವಿನ ಮೊದಲಿನ ಛಾಯಾಚಿತ್ರ

(ಹೆಸರು ಮತ್ತು ಸಹಿ)

CA/CRP, ZBNF ಯೋಜನೆ/ ATM/BTM, ATMA ಯೋಜನೆ
__________ ಹೋಬಳಿ.

ಸಹಾಯಕ ಕೃಷಿ ಅಧಿಕಾರಿ
ರೈತ ಸಂಪರ್ಕಕೇಂದ್ರ,

ಕೃಷಿ ಅಧಿಕಾರಿ,
ರೈತ ಸಂಪರ್ಕಕೇಂದ್ರ,

## ಮುಂಗಡ ಹಣ ಸಂದ ರಸೀದಿ

ಸಹಾಯಕ ಕೃಷಿ ನಿರ್ದೇಶಕರು ______________ತಾಲೂಕು ________ ಜಿಲ್ಲೆ ಇವರಿಂದ 2019–20 ನೇ ಸಾಲಿನ ಲೆಕ್ಕ ಶೀರ್ಷಿಕೆ: ____________ರಡಿ ರೈತಸಿರಿ ಯೋಜನೆಯಡಿ __________ ಸಿರಿಧಾನ್ಯವನ್ನು ________ ಎಕರೆ ಪ್ರದೇಶದಲ್ಲಿ ಬಿತ್ತನೆ ಮಾಡಿದ ಬಾಬ್ತು ಸರ್ಕಾರದ ಪ್ರೋತ್ಸಾಹಧನ ರೂ.________ (ಒಟ್ಟು ರೂಪಾಯಿ______________________) ಗಳನ್ನು ವಂದಾನಾಪೂರ್ವಕವಾಗಿ ಸ್ವೀಕರಿಸಿದ್ದೇನೆ.

ಸ್ಥಳ:–　　　　　　　　　　　　　　ರೈತರ ಸಹಿ

ದಿನಾಂಕ:–　　　　　　　　　　ರೈತರ ಹೆಸರು ಮತ್ತು ಸಂಪೂರ್ಣ ವಿಳಾಸ.

## ದೃಢೀಕರಣ

ಶ್ರೀ/ಶ್ರೀಮತಿ______________ ಬಿನ್/ಕೋಂ. ______________,ಗ್ರಾಮ ________ ಹೋಬಳಿ__________ತಾಲೂಕು__________ಜಿಲ್ಲೆ__________ಇವರು 2019–20 ನೇ ಸಾಲಿನ ರೈತಸಿರಿ ಯೋಜನೆಯಡಿ________ ಸಿರಿಧಾನ್ಯವನ್ನು ________ ಎಕರೆ ಪ್ರದೇಶದಲ್ಲಿ ಬಿತ್ತನೆ ಮಾಡಿದ ಬಾಬ್ತು ಇವರಿಗೆ ಸರಕಾರದ ಪ್ರೋತ್ಸಾಹಧನ ರೂ. ________ (ಒಟ್ಟು ರೂಪಾಯಿ ______________________) ಗಳನ್ನು ಮಾತ್ರ ಮಂಜೂರು ಮಾಡಬಹುದು.

(ಹೆಸರು ಮತ್ತು ಸಹಿ)

| | | |
|---|---|---|
| **CA/CRP,** ZBNF ಯೋಜನೆ/ ATM/BTM, ATMA ಯೋಜನೆ ________ ಹೋಬಳಿ. | ಸಹಾಯಕ ಕೃಷಿ ಅಧಿಕಾರಿ ರೈತ ಸಂಪರ್ಕ ಕೇಂದ್ರ ________ ಹೋಬಳಿ. | ಕೃಷಿ ಅಧಿಕಾರಿ, ರೈತ ಸಂಪರ್ಕ ಕೇಂದ್ರ, ______ ಹೋಬಳಿ. |

## ಮುಂಗಡ ಹಣ ಸಂದ ರಶೀದಿ

ಸಹಾಯಕ ಕೃಷಿ ನಿರ್ದೇಶಕರು ______________________ತಾಲೂಕು ______________ಜಿಲ್ಲೆ ಇವರಿಂದ 2019–20 ನೇ ಸಾಲಿನ ಲೆಕ್ಕ ಶೀರ್ಷಿಕೆ:______________ರಡಿ ರೈತಸಿರಿ ಯೋಜನೆಯಡಿ ___________ಸಿರಿಧಾನ್ಯವನ್ನು ________ ಎಕರೆ ಪ್ರದೇಶದಲ್ಲಿ ಬಿತ್ತನೆ ಮಾಡಿದ ಬಾಬ್ತು ಸರ್ಕಾರದ ಪ್ರೋತ್ಸಾಹಧನ ರೂ.__________ (ಒಟ್ಟು ರೂಪಾಯಿ_____________________________________) ಗಳನ್ನು ವಂದಾನಾಪೂರ್ವಕವಾಗಿ ಸ್ವೀಕರಿಸಿದ್ದೇನೆ.

ರೈತರ ಸಹಿ

ಸ್ಥಳ:–

ರೈತರ ಹೆಸರು ಮತ್ತು ಸಂಪೂರ್ಣ ವಿಳಾಸ.

ದಿನಾಂಕ:–

## ದೃಡೀಕರಣ

ಶ್ರೀ/ಶ್ರೀಮತಿ_______________________ ಬಿನ್/ಕೋಂ. ______________________ಗ್ರಾಮ __________ ಹೋಬಳಿ______________ತಾಲೂಕು______________ಜಿಲ್ಲೆ____________ಇವರು 2019–20 ನೇ ಸಾಲಿನ ರೈತಸಿರಿ ಯೋಜನೆಯಡಿ__________ ಸಿರಿಧಾನ್ಯವನ್ನು ________ ಎಕರೆ ಪ್ರದೇಶದಲ್ಲಿ ಬಿತ್ತನೆ ಮಾಡಿದ ಬಾಬ್ತು ಇವರಿಗೆ ಸರಕಾರದ ಪ್ರೋತ್ಸಾಹಧನ ರೂ. ________ (ಒಟ್ಟು ರೂಪಾಯಿ __________________________________________) ಗಳನ್ನು ಮಾತ್ರ ಮಂಜೂರು ಮಾಡಬಹುದು.

(ಹೆಸರು ಮತ್ತು ಸಹಿ)

**CA/CRP, ZBNF** ಯೋಜನೆ/
**ATM/BTM, ATMA** ಯೋಜನೆ
___________ ಹೋಬಳಿ.

ಸಹಾಯಕ ಕೃಷಿ ಅಧಿಕಾರಿ
ರೈತ ಸಂಪರ್ಕ ಕೇಂದ್ರ
__________ ಹೋಬಳಿ.

ಕೃಷಿ ಅಧಿಕಾರಿ,
ರೈತ ಸಂಪರ್ಕಕೇಂದ್ರ,
_______ ಹೋಬಳಿ.

(ಸರ್ಕಾರದ ಆದೇಶ ಸಂಖ್ಯೆ:ಕೃಇ 45 ಕೃಯೋಕಾ 2019 ದಿನಾಂಕ:17-07-2019ರ ಅನುಬಂಧ-5)

## ಸಿರಿಧಾನ್ಯ ಯೋಜನಾ ಅನುಷ್ಠಾನ ವೇಳಾಪಟ್ಟಿ

| ಮಾಹೆ | ನಿರ್ವಹಿಸಬೇಕಾದ ಕರ್ತವ್ಯಗಳು |
|---|---|
| ಜೂನ್-2019 | ಫಲಾನುಭವಿಗಳ ಆಯ್ಕೆ ಮತ್ತು ದಾಖಲಾತಿಗಳ ಸಂಗ್ರಹಣೆ<br>ವ್ಯಾಪಕ ಪ್ರಚಾರ ಕೈಗೊಳ್ಳುವುದು |
| ಜುಲೈ-2019 | ಹೋಬಳಿವಾರು/ತಾಲ್ಲೂಕುವಾರು ಕ್ರಿಯಾಯೋಜನೆ ಸಿದ್ಧಪಡಿಸಿ ಅನುಮೋದನೆಗೆ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ ಸಲ್ಲಿಸುವುದು |
| ಆಗಸ್ಟ್-2019 | ಬಿತ್ತನೆ ಪರಿಶೀಲನೆ/ಉಸ್ತುವಾರಿ ಕೈಗೊಳ್ಳುವುದು |
| ಸೆಪ್ಟೆಂಬರ್-2019 | |
| ಅಕ್ಟೋಬರ್-2019 | ಬಿಡುಗಡೆಯಾದ ಅನುದಾನವನ್ನು ರೈತರಿಗೆ ನೇರ ಸೌಲಭ್ಯ ಮೂಲಕ ರೈತರ ಬ್ಯಾಂಕ್ ಖಾತೆಗೆ ಪ್ರೋತ್ಸಾಹಧನ ಜಮೆ ಮಾಡುವುದು. |